









ವೈವಿಧ್ಯಮಯ ಮೀಸೆಗಳನ್ನು ಕಾಣುವುದಕ್ಕೆ ಒಂದು ಅವಕಾಶ ಸಿಗುತ್ತದಲ್ಲ ಅದೇ ಸೊಗಸು!

ಅಮೆರಿಕಾ, ಯೂರೋಪುಗಳಲ್ಲಿ ಮೀಸೆ ಸಂಘಗಳಿವೆ. ಮೀಸೆ ಸಂಘಗಳ ಸದಸ್ಯರು ಆಯ್ಕೆ ಮಾಡುವ ನ್ಯಾಯಾಧೀಶರ ತಂಡ ಈ ಸ್ಪರ್ಧೆಯಲ್ಲಿ ತೀರ್ಪು ನೀಡುತ್ತದೆ.  ರಾಷ್ಟ್ರಮಟ್ಟದ ಮೀಸೆ ಸ್ಪರ್ಧೆಗಳಲ್ಲಿ ಗೆಲುವಿನ ನಗೆ ಬೀರಿದ ಮೀಸೆಗಳು, ವಿವಿಧ ಮೀಸೆ ಸಂಘಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಮೀಸೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತವೆ.

ಮಾಮೂಲಿ ಗಡ್ಡ, ಮೀಸೆಗಳಿಂದ ಹಿಡಿದು, ಚಿಕ್ಕ, ದೊಡ್ಡ, ದಪ್ಪ/ತೆಳ್ಳಗಿನ ಮೀಸೆ ಗಡ್ಡಗಳ ಸಹಿತ ಚಿತ್ರ ವಿಚಿತ್ರ ಮೀಸೆಗಳ ದಂಡೇ ಸ್ಪರ್ಧೆಯಲ್ಲಿ ನೆರೆದಿರುತ್ತವೆ.

ಈ ಸ್ಪರ್ಧೆಗಳಲ್ಲೂ ಎರಡು ವಿಭಾಗಗಳಿರುತ್ತವೆ. ಮೊದಲನೆಯದ್ದು ಬರಿಯ ಮೀಸೆ ಸ್ಪರ್ಧೆ; ಎರಡನೆಯದ್ದು ಮೀಸೆ ಮತ್ತು ಗಡ್ಡದ ಸ್ಪರ್ಧೆ.

ತಿರುಚಿಮುರುಚಿ, ಸುರುಳಿಯಾಗಿ ಸುತ್ತಿದ, ಚಿತ್ತಾರದಿಂದ ಕಂಗೊಳಿಸುವ ಮೀಸೆಗಳ ಕಂಡು ಖುಷಿ ಪಡುವ ಸರದಿ ಪ್ರೇಕ್ಷರದು. ಸ್ಪರ್ಧಾಳುಗಳು ವೈವಿಧ್ಯಮಯ ವಿನ್ಯಾಸಗಳು ಹೆಚ್ಚು ಕಾಲ ಉಳಿಯಲೆಂದು ಜೆಲ್ ಮತ್ತು ನೈಸರ್ಗಿಕ ಗೋಂದುಗಳನ್ನು ಬಳಸುತ್ತಾರೆ.

ಮೀಸೆ– ಗಡ್ಡಗಳ ಸ್ಪರ್ಧೆಗೆ ಧಿರಿಸೂ ಮುಖ್ಯ! ಮೀಸೆ ಸ್ಪರ್ಧೆಯಲ್ಲಿ ವೇದಿಕೆ ಏರುವವರಿಗೆ ಇಂಥದೇ ಉಡುಗೆ–ತೊಡುಗೆ ಇರಬೇಕೆಂಬ ನಿಯಮವೇನೂ ಇಲ್ಲ. ಆದರೆ ಮೀಸೆಗೆ ಹೊಂದುವ ವೇಷಭೂಷಣ ತೊಟ್ಟು ಠೀವಿಯಲ್ಲಿ ಮೆರೆಯುತ್ತಾರೆ ಸ್ಪರ್ಧಿಗಳು.

ಸ್ಪರ್ಧೆಯಲ್ಲಿ ವಿಜಯಿಯಾದವರಿಗೆ ಚಿನ್ನ ಬೆಳ್ಳಿ, ಕಂಚು ಪದಕಗಳನ್ನು ಬಹುಮಾನವಾಗಿ ನೀಡಲಾಗುತ್ತದೆ. ಜೊತೆಗೆ ಹತ್ತು ಸಮಾಧಾನಕರ ಬಹುಮಾನಗಳು ಸಹ ಇರುತ್ತವೆ. ಕಾರ್ಯಕ್ರಮ ಭರ್ಜರಿ ಔತಣ ಕೂಟ, ಕುಣಿತ, ಮೋಜು–ಮಸ್ತಿಯೊಂದಿಗೆ ಮುಕ್ತಾಯವಾಗುತ್ತದೆ.

ಇಂಗ್ಲೆಂಡ್, ಆಸ್ಟ್ರೇಲಿಯಾ, ಅಮೆರಿಕಾ ಮುಂತಾದ ದೇಶಗಳಲ್ಲಿ ವಿಭಿನ್ನ ಋತುಮಾನದಲ್ಲಿ ಈ ಸ್ಪರ್ಧೆ ನಡೆಯುತ್ತದೆ. ಆಸ್ಟ್ರೇಲಿಯಾದ ಲಿಯೋ ಗ್ಯಾಂಗ್ ನಲ್ಲಿ ಬರುವ ಅಕ್ಟೋಬರ್ 3ಕ್ಕೆ ನಡೆಯಲಿರುವ ಮೀಸೆ– ಗಡ್ಡ ಸ್ಪರ್ಧೆಯಂತೂ ತುಂಬ ಹೆಸರುವಾಸಿ. ಅಲ್ಲಿ ಮೀಸೆ ತಿರುವಲು ನೀವು ಹೊರಟಿರುವಿರಾದರೆ ಬೆಸ್ಟ್ ಆಫ್ ಲಕ್!

ಮೀಸೆ ಮಾವನ ಆಯ್ಕೆ ಮಾಡುವ ತೀರ್ಪುಗಾರರ ದಂಡು